ಸಂಖ್ಯೆ.ಎ7/ಎಫ್.ಸಿ. ಆಕ್ಟ್./ಸಿಆರ್. /2014-15

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ,
ಕೋಲಾರ ಅರಣ್ಯ ವಿಭಾಗ,
ಕೋಲಾರ, ದಿನಾಂಕ 9-6-2015

ರವರಿಗೆ

**ತಹಶೀಲ್ದಾರ್,**
**ಕೋಲಾರ ತಾಲ್ಲೂಕು,**
**ಕೋಲಾರ.**

ಮಾನ್ಯರೆ,

| | | |
|---|---|---|
| ವಿಷಯ | "ಸಿ" ಮತ್ತು "ಡಿ" ದರ್ಜೆಯ ಜಮೀನು ಸರ್ವೆ.ನಂ.152 ಪಿ1 ಅಮ್ಮೇರಹಳ್ಳಿ ಗ್ರಾಮ, ಕಸಬಾ ಹೋಬಳಿಯ ಜಮೀನಿನ ಬದಲಾಗಿ ವಕ್ಕಲೇರಿ ಹೋಬಳಿಯ ನಾಗಲಾಪುರ ಗ್ರಾಮದ ಸರ್ವೆ.ನಂ.11 ರಲ್ಲಿ 28.69 ಎಕರೆ ಜಮೀನನ್ನು ಪಹಣಿಯ ಕಾಲಂ 11 ರಲ್ಲಿ ಮೇ॥ ಜೀನತ್ ಟ್ರಾನ್ಸಪೋರ್ಟ್ಸ್ ಕಂಪನಿ, ಜೀನತ್ ಹೌಸ್, ಬಳ್ಳಾರಿ. ಕಂಪನಿಯ ಹೆಸರಿನಲ್ಲಿ ನಮೂದಿಸಿ ಅರಣ್ಯ ಇಲಾಖೆಗೆ ವರ್ಗಾಯಿಸುವ ಬಗ್ಗೆ. | |
| ಉಲ್ಲೇಖ: | 1 | ಮಾನ್ಯ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರರವರ ಕಛೇರಿ ಪತ್ರದ ಸಂಖ್ಯೆ ಎಲ್ಎನ್ಡಿ/ಸಿಆರ್-63/2013-14 ದಿನಾಂಕ 26-6-2014 |
| | 2 | ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ರವರ ಪತ್ರ ಸಂಖ್ಯೆ.ಎ5(1)ಎಂಎನ್ಜಿ /ಸಿಆರ್-2/2014-15 ದಿನಾಂಕ 10-4-2015 |
| | 3 | ಮೇ॥ ಜೀನತ್ ಟ್ರಾನ್ಸಪೋರ್ಟ್ಸ್ ಕಂಪನಿ, ಜೀನತ್ ಹೌಸ್, ಬಳ್ಳಾರಿ. ಇವರ ಪತ್ರ ದಿನಾಂಕ 9-6-2015 |

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಆರ್.ಎಂ ಬ್ಲಾಕ್‌ನಲ್ಲಿ ಗಣಿ ಗುತ್ತಿಗೆ ಸಂಖ್ಯೆ 2547 ಮತ್ತು 2309 ಕಂಪನಿಗೆ ರಸ್ತೆ ನಿರ್ಮಾಣಕ್ಕಾಗಿ 9.4 ಹೆಕ್ಟೇರ್ ಮತ್ತು 5.4 ಹೆಕ್ಟೇರ್ ಅರಣ್ಯ ಭೂಮಿಯನ್ನು ಮೆ: ಮೇ॥ ಜೀನತ್ ಟ್ರಾನ್ಸ್‌ಪೋರ್ಟ್ ಕಂಪನಿ, ಬಳ್ಳಾರಿ ಇವರು ಅರಣ್ಯ ಭೂಮಿಯನ್ನು ಉಪಯೋಗಿಸುತ್ತಿದ್ದು, ಇದಕ್ಕೆ ಪರ್ಯಾಯವಾಗಿ 9.4 ಹೆಕ್ಟೇರ್ ಹಾಗೂ 5.4 ಹೆಕ್ಟೇರ್ ಒಟ್ಟು 14.8 ಹೆಕ್ಟೇರ್ ಅರಣ್ಯೇತರ ಭೂಮಿಯನ್ನು ಪರಿಹಾರಾತ್ಮಕ ನೆಡುತೋಪು ಬೆಳೆಸಲು ಅವಶ್ಯಕತೆ ಇರುವ ಸಲುವಾಗಿ ಅರಣ್ಯೇತರ ಭೂಮಿಯನ್ನು ಗುರುತಿಸಿ ಮಂಜೂರು ಮಾಡಬೇಕೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವಿಭಾಗ, ಬಳ್ಳಾರಿ ರವರು ಹಾಗೂ ಮೇಲ್ಕಂಡ ಕಂಪನಿಯವರು ಕೋರಿರುತ್ತಾರೆ. ಬಳಕೆದಾರರ ಕೋರಿಯನ್ವಯ ಪರಿಶೀಲಿಸಿ ಮಾನ್ಯ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ ರವರ ಕಛೇರಿ ಪತ್ರದ ಸಂಖ್ಯೆ ಎಲ್ಎನ್ಡಿ/ಸಿಆರ್-63/2013-14 ದಿನಾಂಕ 26-6-2014 ಈ ಕಛೇರಿಗೆ ಹಸ್ತಾಂತರಿಸಿರುವ ಸಿ ಮತ್ತು ಡಿ ದರ್ಜೆ ಜಮೀನಿನಲ್ಲಿ ಅಂದರೆ ಕೋಲಾರ ತಾಲ್ಲೂಕು ಅಂತರಗಂಗೆ ಪ್ರದೇಶದ ಅಮ್ಮೇರಹಳ್ಳಿ ಸ.ನಂ.152/ಪಿ1 ರಲ್ಲಿ ಒಟ್ಟು 14.8 ಹೆಕ್ಟೇರ್ ಪ್ರದೇಶದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಆರ್‌ಟಿಸಿ ಕಾಲಂ ನಂ.11ರಲ್ಲಿ ಇಲಾಖೆ ಪರಿಹಾರಾತ್ಮಕ ನೆಡುತೋಪನ್ನು ಬೆಳೆಸುವ ಸಲುವಾಗಿ ಅರಣ್ಯ ಇಲಾಖೆಗೆ ವರ್ಗಾಯಿಸಿರುವುದು ಸರಿಯಷ್ಟೆ.

ಮುಂದುವರೆದು, ಕೋಲಾರ ತಾಲ್ಲೂಕು ಅಂತರಗಂಗೆ ಪ್ರದೇಶದ ಅಮ್ಮೇರಹಳ್ಳಿ ಸ.ನಂ.152/ಪಿ1 ರಲ್ಲಿ ಒಟ್ಟು 41.15 ಎಕರೆ ಪ್ರದೇಶವಿದ್ದು, ಇಲಾಖೆಗೆ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಒಟ್ಟು 36.57 (14.8ಹೆ) ಎಕರೆ ಆರ್‌ಟಿಸಿ ಕಾಲಂ ನಂ.11 ರಲ್ಲಿ ಮೇ॥ ಜೀನತ್ ಟ್ರಾನ್ಸ್‌ಪೋರ್ಟ್ ಕಂಪನಿ, ಬಳ್ಳಾರಿ ಇವರ ಹೆಸರು ನಮೂದಿಸಲಾಗಿರುತ್ತದೆ. ಆದರೆ ಐಟಿಸಿ ಸೆಲ್, ಬೆಂಗಳೂರು ರವರು ಸದರಿ ಪ್ರದೇಶವನ್ನು ಗೂಗಲ್‌ನಲ್ಲಿ ವೀಕ್ಷಿಸಿ, ಸದರಿ ಸರ್ವೆ.ನಂ.152/ಪಿ1ರ ಪ್ರದೇಶವು ಬೆಟ್ಟಗುಡ್ಡಗಳಿಂದ ಕೂಡಿದ್ದು, ಸದರಿ ಪ್ರದೇಶದಲ್ಲಿ ನೆಡುತೋಪು ಬೆಳೆಸಲು ಸಾದ್ಯವಿರುವುದಿಲ್ಲ. ಆದ್ದರಿಂದ ಸದರಿ ಕಂಪನಿಯವರಿಗೆ ನಮೂದಿಸಿರುವ ಪ್ರದೇಶದ ಬದಲು ನೆಡುತೋಪು ಬೆಳೆಸಲು ಯೋಗ್ಯವಾದ ಪ್ರದೇಶವನ್ನು ನಮೂದಿಸಲು ಉಲ್ಲೇಖ(2) ರಲ್ಲಿ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ( ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ರವರು ಮಾನ್ಯ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ ರವರಿಗೆ ಕೋರಿರುತ್ತಾರೆ. (ಪ್ರತಿ ಅಡಕಗೊಳಿಸಿದೆ).

ಕೋಲಾರ ತಾಲ್ಲೂಕು, ಅಂತರಗಂಗೆ ಪ್ರದೇಶದ ಅಮ್ಮೇರಹಳ್ಳಿ ಸ.ನಂ.152/ಪಿ1 ರಲ್ಲಿ ಒಟ್ಟು 41.15 ಎಕರೆ ಪ್ರದೇಶದಲ್ಲಿ 8.57(3.46ಹೆ)ಎಕರೆ ಪ್ರದೇಶವು ನೆಡುತೋಪು ಬೆಳೆಸಲು ಯೋಗ್ಯವಾಗಿರುತ್ತದೆ. ಹಾಗೂ ವಕ್ಕಲೇರಿ ಹೋಬಳಿಯ ನಾಗಲಾಪುರ ಸ.ನಂ.11 ರಲ್ಲಿ ಒಟ್ಟು 98.37(39.80ಹೆ) ಎಕರೆ ಪ್ರದೇಶವಿದ್ದು, ಸದರಿ ಪ್ರದೇಶದಲ್ಲಿ ಇಲಾಖೆಗೆ 92.31((37.35 ಹೆ) ಎಕರೆ ಪ್ರದೇಶ ವರ್ಗಾಯಿಸಲಾಗಿರುತ್ತದೆ. ಸದರಿ ಪ್ರದೇಶದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಮೇ॥ SMIORE, SANDUR ರವರಿಗೆ 56.63 (22.91ಹೆ) ಎಕರೆ ಪ್ರದೇಶವನ್ನು ನಮೂದಿಸಲಾಗಿರುತ್ತದೆ. ಉಳಿದಂತಹ ಪ್ರದೇಶದಲ್ಲಿ ಮೇ॥ ಜೀನತ್ ಟ್ರಾನ್ಸ್‌ಪೋರ್ಟ್ ಕಂಪನಿ, ಬಳ್ಳಾರಿ ಇವರಿಗೆ 28.00 (11.33ಹೆ) ಎಕರೆ ಪ್ರದೇಶದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸುವ ಸಲುವಾಗಿ ಆರ್‌ಟಿಸಿ ಕಾಲಂ ನಂ.11ರಲ್ಲಿ ನಮೂದಿಸಿ, ಆರ್‌ಟಿಸಿ ಮತ್ತು ಮುಟೇಷನ್ ಮಾಡಿಕೊಡಲು ಶಿಫಾರಸ್ಸು ಮಾಡಬೇಕಾಗಿ ಮೇ॥ ಜೀನತ್ ಟ್ರಾನ್ಸ್‌ಪೋರ್ಟ್ಸ್ ಕಂಪನಿ, ಜೀನತ್ ಹೌಸ್, ಬಳ್ಳಾರಿ, ರವರು ಉಲ್ಲೇಖ(3)ರಲ್ಲಿ ಈ ಕಛೇರಿಗೆ ಕೋರಿರುತ್ತಾರೆ.

ಮೇಲ್ಕಂಡ ಎಲ್ಲಾ ದಾಖಲಾತಿಗಳನ್ನು ಈ ಪತ್ರದೊಂದಿಗೆ ಅಡಕಗೊಳಿಸುತ್ತಾ, ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ( ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ರವರು ತಿಳಿಸಿರುವಂತೆ ಹಾಗೂ ಮೇ॥ ಜೀನತ್ ಟ್ರಾನ್ಸ್‌ಪೋರ್ಟ್ಸ್ ಕಂಪನಿ, ಜೀನತ್ ಹೌಸ್, ಬಳ್ಳಾರಿ.ರವರು ಕೋರಿರುವಂತೆ, ಒಟ್ಟು 14.8 ಹೆ ಪ್ರದೇಶವನ್ನು ಈ ಕೆಳಕಂಡಂತೆ ಪರಿಹಾರಾತ್ಮಕ ನೆಡುತೋಪು ಬೆಳೆಸುವ ಸಲುವಾಗಿ ಆರ್‌ಟಿಸಿ ಕಾಲಂ.ನಂ.11ರಲ್ಲಿ ಮೇ॥ ಜೀನತ್ ಟ್ರಾನ್ಸ್‌ಪೋರ್ಟ್ ಕಂಪನಿ, ಬಳ್ಳಾರಿ ಇವರ ಹೆಸರು ನಮೂದಿಸಿ ಕೊಡಬೇಕಾಗಿ ಈ ಮೂಲಕ ಕೋರಲಾಗಿದೆ.

1. ಅಂತರಗಂಗೆ ಪ್ರದೇಶದ ಅಮ್ಮೇರಹಳ್ಳಿ ಸ.ನಂ.152/ಪಿ1 ರಲ್ಲಿ 8.57ಎಕರೆ (3.46ಹೆ)
2. ವಕ್ಕಲೇರಿ ಹೋಬಳಿಯ ನಾಗಲಾಪುರ ಸ.ನಂ.11 ರಲ್ಲಿ 28.00ಎಕರೆ (11.33ಹೆ)

ತಮ್ಮ ನಂಬುಗೆಯ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೋಲಾರ ವಿಭಾಗ, ಕೋಲಾರ.

ಪ್ರತಿಯನ್ನು:

1. ಮಾನ್ಯ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯಪಡೆ ಮುಖ್ಯಸ್ಥರು), ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಮಾನ್ಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಭೂದಾಖಲೆ), ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಪ್ರಾದೇಶಿಕ), ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಮಾನ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವೃತ್ತ, ಬಳ್ಳಾರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
6. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬಳ್ಳಾರಿ ವಿಭಾಗ, ಬಳ್ಳಾರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
7. ಮೇ॥ ಜೀನತ್ ಟ್ರಾನ್ಸ್‌ಪೋರ್ಟ್ ಕಂಪನಿ,ಜೀನತ್ ಹೌಸ್. ಕೌಲ್ ಬಜಾರ್,ಬಳ್ಳಾರಿ–583102. ರವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೋಲಾರ ವಿಭಾಗ, ಕೋಲಾರ.

VIS D:\Backup 29-01-2014\A7& land details 2012-13\A7 land details & Part Sy No & Tree preservation\part Sy no's-1(a) Stage-I & II.docx